# ದಲಿತ ಆತ್ಮಕತೆಗಳಲ್ಲಿ ಬಾಲ್ಯ ಮತ್ತು ಶಾಲಾ ಶಿಕ್ಷಣದ ನಿರೂಪಣೆಗಳು

**ಕಾಂತರಾಜ ಯಾದವ್ ಸಿ.**

ಸಂಶೋಧನಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

DOI: https://doi.org/10.5281/zenodo.15124072

## ABSTRACT:

ಮನುಷ್ಯನ ಬದುಕಿನಲ್ಲಿ ಬಾಲ್ಯದ ಅನುಭವವು ತುಂಬಾ ಮುಖ್ಯವಾದದ್ದು. ಬಾಲ್ಯದ ಬದುಕು ಎಲ್ಲರಿಗೂ ಒಂದೇ ರೀತಿಯದಾಗಿರುವುದಿಲ್ಲ. ಆ ವಯಸ್ಸಿನ ಶಿಕ್ಷಣವೂ ಕೂಡ ಬಾಲ್ಯದ ಅನುಭವವಗಳನ್ನು ದಟ್ಟವಾಗಿ ಆವರಿಸಿಕೊಂಡಿರುತ್ತದೆ. ಜಾತಿಯಾಧಾರಿತ ಸಾಮಾಜಿಕ ವ್ಯವಸ್ಥೆಯೂ ಕೂಡ ಈ ಬಾಲ್ಯದ ಮೇಲೆ ಪ್ರಭಾವವನ್ನು ಬೀರುತ್ತದೆ. ಮೇಲ್ಜಾತಿ, ಮಧ್ಯಮ ಜಾತಿಗಳು ಮೂಲಭೂತ ಸೌಕರ್ಯಗಳು ಮತ್ತು ಶಿಕ್ಷಣದ ಕುರಿತಂತೆ ಎಚ್ಚರಿಕೆಯಿಂದಿದ್ದರೆ, ತಳ ಸಮುದಾಯಗಳು ಮತ್ತು ಶ್ರಮಿಕ ವರ್ಗ ಮೂಲಭೂತ ಸೌಕರ್ಯಗಳಿಗಾಗಿಯೇ ಹೋರಾಟ ನಡೆಸುತ್ತಿರುವುದನ್ನು ಕಾಣಬಹುದು. ಈ ಸಂಧರ್ಭದಲ್ಲಿ ಶಿಕ್ಷಣದ ಕುರಿತ ಮಾತು ಕನಸಿನ ಪಯಣವೇ ಸರಿ. ಹಸಿವು ಮತ್ತು ಅವಮಾನಗಳಾಚೆಗಿನ ಬದುಕನ್ನು ದಲಿತ ಆತ್ಮಕಥೆಗಳಲ್ಲಿ ಕಾಣಬಹುದು. ಶಾಲೆಯ ಕುರಿತಂತೆ, ಶಿಕ್ಷಕರ ಕುರಿತಂತೆ ದಲಿತ ಆತ್ಮಕತೆಗಳು ಚಿತ್ರಿಸುವ ಸೂಕ್ಷ್ಮ ಪ್ರಜ್ಞೆಯು ಶಿಕ್ಷಣ ವ್ಯವಸ್ಥೆ ಕುರಿತ ಹೊಸ ಆಯಾಮವನ್ನು ತೆರೆದಿಡುತ್ತವೆ. ಆ ಕುರಿತ ಒಂದು ಸೂಕ್ಷ್ಮ ಚಿತ್ರಣವನ್ನು ಇಲ್ಲಿ ವಿಶ್ಲೇಷಿಸ ಲಾಗಿದೆ.

## KEYWORDS:

ದಲಿತ ಆತ್ಮಕತೆ, ಶಾಲಾಶಿಕ್ಷಣ, ಜಾತಿ, ಅಸ್ಪೃಶ್ಯತೆ, ಅವಮಾನ.

ದಲಿತ ಆತ್ಮಕತೆಗಳು ಶಾಲೆಯ ಅನುಭವದ ಮೇಲೆಯೂ ಕೂಡ ತಮ್ಮ ಗಮನವನ್ನು ಕೇಂದ್ರೀಕರಿಸುತ್ತವೆ. ಶಾಲೆ ಮತ್ತು ಗ್ರಾಮದಲ್ಲಿ ಬಾಲ್ಯವನ್ನು ಬದಲಾಗದ ಜಾತಿ, ದಬ್ಬಾಳಿಕೆ, ಅಸ್ಪೃಶ್ಯತೆಯ ನಡುವೆಯೇ ಕಳೆದಿರುತ್ತಾರೆ. ಈ ಶಾಲಾ ವ್ಯವಸ್ಥೆಯು ಬೇರೆಡೆಯ ವಯಸ್ಕ ಜೀವನದ ಕೊಂಡಿಯಾಗಿಯೂ ಕೂಡ ಕಾರ್ಯನಿರ್ವಹಿಸುತ್ತಿರುತ್ತದೆ. ಈ ಶೈಕ್ಷಣಿಕ ಅನುಭವವು ಮನೆಯಿಂದ ಸಾರ್ವಜನಿಕ ಜೀವನಕ್ಕೆ ಅರ್ಥಮಾಡಿಕೊಳ್ಳಲು ನಿರ್ಣಾಯಕವಾಗಿದೆ. ಬಾಲ್ಯದ ಶಿಕ್ಷಣವು ಅವರನ್ನು ಇಲ್ಲಿಯವರೆಗೆ ಎದುರಿಸಿದ ದಬ್ಬಾಳಿಕೆಯಿಂದ ಮುಕ್ತಗೊಳಿಸುವ ಸಾಮರ್ಥ್ಯ ಮತ್ತು ಕೌಶಲ್ಯವನ್ನು ಜ್ಞಾನದೊಂದಿಗೆ ಸಜ್ಜುಗೊಳಿಸುವ ಪ್ರಾಮುಖ್ಯತೆಯನ್ನು ಸಹ ವಿವರಿಸುತ್ತದೆ.

ಶಾಲೆಯಲ್ಲಿನ ದಲಿತ ಮಕ್ಕಳ ಅನುಭವವು, ದಲಿತತ್ವದೊಂದಿಗೆ ಬರುವ ಯಾತನೆ, ನೋವುಗಳು ಹೊರಗಿನವರಿಗೆ ಸಹಜವೆಂಬಂತೆ ಅನಿಸಿದರೂ, ನಿಜದ ಅವಮಾನ, ಯಾತನೆ ಸಂಕಟಗಳನ್ನು, ಜನಾಂಗಿಕ ವಿವರಗಳ ಹಿನ್ನೆಲೆಯಲ್ಲಿ ತೆರೆದಿಡುತ್ತವೆ. ಈ ಬಾಲ್ಯದ ವಿವರಣೆಗಳಲ್ಲಿ ಶಾಲಾ ಹಂತದಲ್ಲಿಯೇ ಮಕ್ಕಳು ಹೊರಗಿರಲು ಕಾರಣಗಳು ಮತ್ತು ಶಾಲೆಗಳ ಕಟ್ಟುಪಾಡುಗಳನ್ನು ಸಹ ವಿವರಿಸುತ್ತವೆ. ಶಾಲೆಯಲ್ಲಿನ ವಿಭಜಕ ಜಾತಿ, ವಯಸ್ಕ ಸಂಧರ್ಭದಲ್ಲಿಯೂ ಸಹ ಜಾತಿ, ಲಿಂಗಗಳು ಸಮಾಜದಲ್ಲಿ ಮುನ್ನೆಲೆಗೆ ಬರುತ್ತಿರುವುದನ್ನು ನಿರೂಪಿಸ ತೊಡಗುತ್ತವೆ. ಆರಂಭದ ವೈಫಲ್ಯ ಮತ್ತು ಸ್ವಲ್ಪ ಯಶಸ್ಸಿನೊಂದಿಗೆ ಮಕ್ಕಳು ಶಾಲೆಗೆ ಹೋಗುತ್ತಾರೆ. ಇದು ಅವರಿಗೆ ಅತ್ಯಂತ ಪ್ರೀತಿಯ ಅನುಭವವಂತೂ ಆಗಿರಲು ಸಾಧ್ಯವಿಲ್ಲ. ಇದಕ್ಕೆ ಸಂಬಂಧಿಸಿದಂತೆ ಕನ್ನಡದ ಕೆಲವು ಲೇಖಕ/ಕಿಯರ ಆತ್ಮಚರಿತ್ರೆಯ ಬಾಲ್ಯದ ಶಾಲಾ ಪ್ರಸಂಗಗಳನ್ನು ದಾಖಲಿಸಿದರೆ ಮೇಲಿನ ನಿರೂಪಣೆಯನ್ನು ಅರ್ಥೈಸಿಕೊಂಡು ವಿಮರ್ಶೆಗೆ ತೊಡಗಬಹುದು.

ಕನ್ನಡದ ಮೊದಲ ದಲಿತ ಆತ್ಮಕಥೆಯಾದ ಗೌರ್ಮೆಂಟ್ ಬ್ರಾಹ್ಮಣದಲ್ಲಿ ಅರವಿಂದ ಮಾಲಗತ್ತಿಯವರ ಶಾಲಾ ಅನುಭವಗಳನ್ನು ನೋಡುವುದಾದರೆ, ಅವರೇ ನಿರೂಪಿಸುವಂತೆ "ಪ್ರಾಥಮಿಕ ಶಾಲೆ ಓದುವಾಗ ನನಗೆ ಸಿಕ್ಕ ಶಿಕ್ಷೆ ಇದು. ಅಲ್ಲೆಲ್ಲಾ ನನ್ನಂತೆ ನನ್ನ ಕೇರಿಯ ಸ್ನೇಹಿತರೂ ಉಂಡಿದ್ದಾರೆ. ನಾವು ಗೋಗರೆದಷ್ಟೂ ನಮ್ಮ ಗುರೋತ್ತಮರಿಗೆ ಹಲ್ಲು ಕಡಿಯುವಷ್ಟು ಕೋಪಬರುತ್ತಿತ್ತು. ಕೈಯ್ಯಲ್ಲಿ ನುಣುಪಿಲ್ಲದ ಉದ್ದನೆಯ ಬಡಿಗೆ, ಗೋಡೆಗೆ ಮುಖಮಾಡಿ ತೂಗುಹಾಕಿದ ಮೇಲೆ ಅವರಿಗೆ ಹೊಡೆಯಲು ಸಿಕ್ಕುವುದು ಉಬ್ಬಿನಿಂತ ನಮ್ಮ ಕುಂಡೆಯ ದಡಗಳು

**"ಸೂಳೆ ಮಗನ ಕುಂಡೆಂದ್ರ ತಬಲಾ ಆಗ್ಯಾವ ನೋಡ**
**ಸಾಲಿ ಉಪ್ಪಿಟ್ಟು ತಿಂದು ತಿಂದು..."**

ಎನ್ನುವುದು ಬಾರಿಸುವುದು.[1] ತರಗತಿಯಲ್ಲಿರುವ ವಿದ್ಯಾರ್ಥಿಗಳಿಗೆ ನೋಡಲು ಅದೊಂದು ಸಿನಿಮಾ ಆಗಿತ್ತು. ಅವರು ಬಿದ್ದು ಬಿದ್ದು ನಕ್ಕಂತೆ, ನನ್ನ ಅಳು ಹೆಚ್ಚಿದಂತೆ ಹೊಡೆತ ಇನ್ನೂ ಜೋರಾಗುತ್ತಿದ್ಧವು. ಕುಂಡೆ ತುಂಬಾ ಬಾಸುಂಡೆ. ಕೊನೆಗೆ ಕರಿ ಕುಂಡೆ ನೋಡಲಾಗದೆ "ಥೂ" ಎಂದು ದೂರಸರಿದಾಗ ಅವರ ದೃಷ್ಟಿ ಹೊರಳುವುದು ನನ್ನ ಕೇರಿಯ ಸ್ನೇಹಿತರ ಮೇಲೆ. ಇವೆಲ್ಲಾ ಶಿಕ್ಷೆಗಳು ಯಾವ ಕಾರಣಕ್ಕಾಗಿ ಗೊತ್ತೆ? ನಾವು ನಮ್ಮ ಮನೆಯಲ್ಲಿ ಹೇಳಿದ ಪಾಠ ಓದಿಕೊಂಡು ಬರಲಿಲ್ಲ ಎಂದಲ್ಲ, ನಮ್ಮ ಕೊಳಕುತನಕ್ಕಾಗಿಯೂ ಅಲ್ಲ. ಶಾಲೆಯಲ್ಲಿ ಪ್ರಾರ್ಥನೆಯಾಗುವುದಕ್ಕೆ ಮುಂಚೆಯೇ ನಾವು ಬಂದು ತರಗತಿಯ ಕಸಗುಡಿಸಬೇಕು... ಬೇಗನೆ ಬಂದು ಕಸ ಗುಡಿಸದಿದ್ದರೆ ಈ ಪರಿಯ ಶಿಕ್ಷೆ. ನಮ್ಮ ಕೇರಿಯವರು ಒಟ್ಟು ತರಗತಿಯಲ್ಲಿ ನಾಲ್ಕುಜನ ದೇವಪ್ಪ,

ಮಲ್ಲಪ್ಪ, ಬಸವಂತಪ್ಪ ಮತ್ತು ನಾನು. ನಾಳೆ ಕಸದ ಪಾಳಿ ಯಾರದಿದೆ ಎನ್ನುವುದನ್ನು ಕರಿಹಲಗೆಯ ಮೇಲೆ ಬರೆಯಲಾಗುತ್ತಿತ್ತು. ನಮ್ಮ ಹೆಸರುಗಳನ್ನು ಕರಿಹಲಗೆಯ ಮೇಲೆ ಯಥಾಸ್ಥಿತಿಯಲ್ಲಿ ಬರೆಯಲು ಅವರು ಹೇಸುತ್ತಿದ್ದರೆಂದು ತೋರುತ್ತದೆ. ಹೀಗಾಗಿ ದೇವ್ಯಾ, ಮಲ್ಯಾ, ಬಸ್ಯಾ ಎಂದು ಹೆಸರನ್ನು ಮುಗುಚಿ ಬರೆಯುತ್ತಿದ್ದರು. ಕಸಗುಡಿಸುವ ಕೆಲಸ ದಲಿತರಾದ ನಮ್ಮ ನಾಲ್ಕು ಜನಗಳಿಗೆ ಮಾತ್ರ ಸೀಮಿತ.[2]

ಇದೇ ರೀತಿಯ ಘಟನೆಗಳು ಬಿ. ಟಿ ಲಲಿತನಾಯಕ್ ಹಾಗೂ ಮೊಗಳ್ಳಿ ಗಣೇಶ ಅವರ ಶಾಲಾ ದಿನಗಳಲ್ಲಿಯೂ ದಾಖಲಾಗಿವೆ. ಅವುಗಳನ್ನು ಈ ಕೆಳಕಂಡಂತೆ ಕಾಣಬಹುದು

“ತಂಗಲಿ ಗ್ರಾಮದಲ್ಲಿದ್ದದ್ದು ಏಕೋಪಾಧ್ಯಾಯ ಶಾಲೆಯೆ. ಅಲ್ಲಿ ಎಲ್ಲಾ ವರ್ಗದ ವಿದ್ಯಾರ್ಥಿ(ನಿ)ಗಳು ಇದ್ದರು ಆದರೆ ಸರ್ವಸಾಮ್ಯವನ್ನು ಹೊಂದಿದ್ದ ಕೆಲವು ಶ್ರೀಮಂತ ಬ್ರಾಹ್ಮಣ ಕುಟುಂಬಗಳ ಮಕ್ಕಳದೇ ದರಬಾರು. ಉಳಿದವರ ಅಸ್ತಿತ್ವಕ್ಕೆ ಯಾವ ಬೆಲೆಯೂ ಇರಲಿಲ್ಲ. ಆ ಶಾಲೆಯಲ್ಲಿದ್ದ ಶಿಕ್ಷಕರೂ ಜಾತಿ ಪಕ್ಷಪಾತಿಯಾಗಿ ವರ್ತಿಸಿ ನಮ್ಮನ್ನೆಲ್ಲಾ ತುಂಬಾ ಕೀಳಾಗಿ ಕಾಣುತ್ತಿದ್ದರು. ಪ್ರತಿ ಶುಕ್ರವಾರ ‘ಸರಸ್ವತಿ ಪೂಜೆ’ ಮಾಡುವ ಪರಿಪಾಟ ಇಟ್ಟುಕೊಂಡಿದ್ದರು. ಆಗೆಲ್ಲಾ ಶಾಲೆಯ ನೆಲವನ್ನು ಸಗಣಿಯಿಂದ ಸಾರಿಸಬೇಕಿತ್ತು, ಆ ಕೆಲಸವನ್ನು ನಮ್ಮಿಂದ(ತಾಂಡದ ಮಕ್ಕಳಿಂದ) ಮಾಡಿಸುತ್ತಿದ್ದರು. ಒಂದಿಬ್ಬರು ದೂರದ ಕಾಲುವೆಯಿಂದ ನೀರನ್ನು ಹೊತ್ತು ತಂದರೆ, ಇನ್ನೊಂದಿಬ್ಬರು ಸಗಣಿ ಆಯ್ದು ತರಬೇಕಿತ್ತು. ನಾವು ನೆಲ ಸಾರಿಸ ತೊಡಗಿದಾಗ ಮೇಲುವರ್ಗದವರ ಮಕ್ಕಳೆಲ್ಲಾ ತಮ್ಮ ಬಟ್ಟೆ ಬರೆಕೊಳೆಯಾಗದಂತೆ ಮುದರಿ ಹಿಡಿದು ಬೆಂಚಿನ ಮೇಲೆ ನಿಂತು “ಲೇ! ಸರಿಯಾಗಿ ನೆಲಬಳಿಯಿರಿ ಎಂದು ಹುಕುಂ.. ಮಾಡುತ್ತಿದ್ದರು.[3]

ಹೇಗೋ ಶಾಲೆಯತ್ತ ಕಾಲು ಹಾಕಿದ್ದೆ. ಮಾಸ್ತರುಗಳು ಅಚ್ಚರಿ ಪಟ್ಟಿದ್ದರು. ಒಬ್ಬ ಬ್ರಾಹ್ಮಣ ಮಾಸ್ತರನಿದ್ದ ಪಾಠ ಮಾಡಿದ ಮೇಲೆ ಪ್ರಶ್ನೆಗಳ ಸುರಿಮಳೆ ಸುರಿಸುತ್ತಿದ್ದ. ಹೊಲೆಯ ಜಾತಿಯ ನಾವು ಕೆಲವು ಹೈಕಳು ಕೊಠಡಿಯ ಹಿಂದೆ ವ್ಯರ್ಥವಾದವರು ಎಂಬಂತೆ ಕೂರುತ್ತಿದ್ದೆವು. ನಮ್ಮನ್ನು ಆ ಮಾಸ್ತರ ಪರಿಗಣಿಸಿಯೇ ಇರಲಿಲ್ಲ ಶಾಲೆಯ ಆವರಣದಲ್ಲಿ ಹಿಂದೆ ಮುಂದೆ ಗಿಡಗೆಂಟೆ ಬೆಳೆದುಕೊಂಡಿವೆ. ಅವನ್ನು ಕಿತ್ತು ಹಾಕಿ ಎಂದು ನಮ್ಮನ್ನು ಹೊರಗೆ ಕಳಿಸಿ ಬಿಡುತ್ತಿದ್ದರು ಎಂದು ಮೊಗಳ್ಳಿ ಗಣೇಶ ರವರು ನಿರೂಪಿಸುತ್ತಾರೆ.[4] ಈ ಮೇಲಿನ ಮೂರು ನಿರೂಪಕರಲ್ಲಿ ಜಾತಿಯ ಕಾರಣಕ್ಕಾಗಿಯೇ ಕಸಗುಡಿಸುವ, ನೆಲಸಾರಿಸುವ, ಗಿಡಗಂಟೆ ಕೀಳುವ ಕೆಲಸಗಳನ್ನು ಮಾಡಿಸುತ್ತಿರುವುದನ್ನು ಕಾಣಬಹುದು. ಈ ನಿರೂಪಣೆಯಲ್ಲಿ ತಳಜಾತಿಗಳಿಂದ ಬಂದ ಕಾರಣಕ್ಕಾಗಿಯೇ ಅದರಲ್ಲೂ ಮುಖ್ಯವಾಗಿ ಇಲ್ಲಿನ ಶಿಕ್ಷಕರು ತಳ ಜಾತಿಗಳು ಪಾರಂಪರಿಕವಾಗಿ ಇದೇ

ರೀತಿಯ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆ ಎಂದು ಭಾವಿಸಿರುವಂತೆ ವಿದ್ಯಾರ್ಥಿಗಳನ್ನು ಈ ರೀತಿಯ ಕಾರ್ಯಗಳಲ್ಲಿ ತೊಡಗಿಸಿರುವುದನ್ನು ಕಾಣಬಹದು. ಪಾರಂಪರಿಕವಾಗಿ ಜಾತಿಯ ಕಾರಣಕ್ಕಾಗಿ ಶಿಕ್ಷಣದಿಂದ ವಂಚಿತರಾದವರು ಶಾಲೆಗೆ ಬಂದಾಗಲೂ ಅವರನ್ನು ಮತ್ತದೇ ಜಾತಿ ಸಂಬಂಧಿತ ಕಾರ್ಯಗಳಲ್ಲಿಯೇ ತೊಡಗುವಂತೆ ಈ ವ್ಯವಸ್ಥೆ ಮಾಡಿಸುತ್ತದೆ. ಅದಕ್ಕಿಂತಲೂ ಹೆಚ್ಚಾಗಿ ಕೆಲಸದ ಕಾರಣಕ್ಕಾಗಿ ಜೀವ ಹಿಂಡುವಂತೆ ಹಿಂಸಿಸುವುದು. ಈ ಕಾರಣಕ್ಕಾಗಿಯೇ ಹಲವು ವಿದ್ಯಾರ್ಥಿಗಳು ಶಾಲೆಯನ್ನು ತೊರೆಯುವ ಕಾರಣಗಳನ್ನು ಕಾಣಬಹುದು.

ಮೇಲಿನ ಪ್ರಸಂಗಗಳಿಗಿಂತಲೂ ಭಿನ್ನವಾದ ಮತ್ತೆರಡು ಪ್ರಸಂಗಗಳೊಂದಿಗೆ ಮುಖಾಮುಖಿಯಾಗುವ ಮೂಲಕ ಇದನ್ನು ಮತ್ತಷ್ಟು ಆಳಕ್ಕೆ ಹೋಗಿ ಚರ್ಚಿಸಬಹುದು ಎನಿಸುತ್ತದೆ. ಗಂಡು –ಹೆಣ್ಣಿನ ನೆಲೆಯಲ್ಲಿ ಆಗುವ ಅವಮಾನಗಳು ಯಾವ ಹಂತಕ್ಕೆ ಹೋಗುತ್ತವೆ ಎನ್ನುವುದನ್ನು ಇಲ್ಲಿ ನೋಡಬಹುದು. ಜಾತೀಯತೆಯನ್ನು ಹೊತ್ತ ಶಿಕ್ಷಕ/ಕಿಯರಿಂದ ಆಗುವ ಅವಮಾನಗಳು ಕೆಲವೊಮ್ಮೆ ಸಾವಿನ ಅಂಚಿಗೂ ಕೂಡ ನೂಕುತ್ತವೆ ಎಂಬುದನ್ನು ಇಲ್ಲಿ ಮನದಟ್ಟು ಮಾಡಲಾಗುತ್ತದೆ.

ಈ ರೀತಿಯ ಸಾವಿಗೆ ಶಿಕ್ಷಕ/ಕಿಯರ ಪರೋಕ್ಷ ನಿಂದನೆಗಳು ಕಾರಣವಾಗಿದ್ದರೂ ಅವು ಶಾಲೆಯಲ್ಲಿರುವ ಶಿಕ್ಷಕ/ಕಿಯರಿಗೆ ಅರಿವಿಗೆ ಬರುವುದಾದರೂ ಹೇಗೆ ಎಂಬುದೇ ಇಲ್ಲಿ ಮೂಡುವ ಪ್ರಶ್ನೆ ಅಂತಹ ಪ್ರಸಂಗವನ್ನು ತುಂಬಾಡಿ ರಾಮಯ್ಯ ನಿರೂಪಿಸುವುದು ಹೀಗೆ "ನನ್ನ ಅಣ್ಣ ವೀರನಾಗಪ್ಪ ನನಗಿಂತ ಮುಂಚಿತವಾಗಿ ಹೈಸ್ಕೂಲಿನಲ್ಲಿ ಓದುತ್ತಿದ್ದ, ನೋಡಲು ಆಕರ್ಷಕನಾಗಿದ್ದ. ಅಣ್ಣ ಕಟ್ಟು ಮಸ್ತಾದ ಆಳು. ಬಹಳ ನಿಷ್ಠುರವಾದಿ ತನಗೆ ತಪ್ಪಾಗಿ ಕಂಡಿದ್ದನ್ನು ಯಾರನ್ನೂ ಲೆಕ್ಕಿಸದೆ ನೇರವಾಗಿ ಖಂಡಿಸುತ್ತಿದ್ದ ಮಹಾಸ್ವಾಭಿಮಾನಿ. ಒಂದು ರೀತಿಯಲ್ಲಿ ನನ್ನ ಪರೋಕ್ಷ ಗುರುವೂ ಆಗಿದ್ದ. ಓದಿನಲ್ಲಿ ಚೂಟಿಯಾಗಿದ್ದ ಅಣ್ಣ, ಬುದ್ಧಿವಂತನೆಂದು ಹೈಸ್ಕೂಲಿನಲ್ಲಿ ಹೆಸರಾಗಿದ್ಧ. ಆದರೆ ಅವನ ನಿಷ್ಠುರ ನಡವಳಿಕೆಗಳನ್ನು ಸಹಿಸದ ಅನೇಕ ಶಿಕ್ಷಕರು ಅವನನ್ನು ಒಳಗೊಳಗೆ ದ್ವೇಷಿಸುತ್ತಿದ್ಧರು. ಇದೇ ಕಾರಣಕ್ಕಾಗಿ ಅಣ್ಣನನ್ನು ಎಂಟನೇ ತರಗತಿಯಲ್ಲಿ ಎರಡುಸಾರಿ ವಿನಾಕಾರಣ ಫೇಲು ಮಾಡಿದರು. ಅವನಿಗೆ ಇದಾವುದೂ ಗೊತ್ತಾಗುತ್ತಿರಲಿಲ್ಲ. ಆದ್ದರಿಂದ ಅವನು ತೆಪ್ಪಗಿದ್ದು ಬಿಡುತ್ತಿದ್ದ. ಆದರೆ ಇದೆಲ್ಲವೂ ಕೆಲವು ಜಾತಿವಾದಿ ಶಿಕ್ಷಕರ ಕರಾಮತ್ತೆಂದು ತಿಳಿದಿದ್ದ ಅಣ್ಣ ಒಳಗೊಳಗೆ ಉರಿಯುತ್ತಿದ್ದ, ಆದರೂ ಅವನು ಅಸಹಾಯಕ ನಾಗಿದ್ದ.

ಎರಡು ಸಾರಿ ವಿನಾಕಾರಣ ಫೇಲಾಗಿದ್ದರಿಂದ ಅಣ್ಣ ದಿನೇ ದಿನೇ ಕುಗ್ಗುತ್ತಾ, ಕ್ರಮೇಣ ಯಾರೊಂದಿಗೂ ಮಾತನಾಡದೆ ಒಂಟಿಯಾಗತೊಡಗಿದ. ಇದೆಲ್ಲವನ್ನೂ ಕಂಡು ಕಂಗಾಲಾದ ಅಪ್ಪ, ತಾನು ಕಂಡು ಕೇಳಿದ ದೇವರುಗಳ ಬಳಿಗೆಲ್ಲಾ ಅಣ್ಣನನ್ನು

ಕರೆದುಕೊಂಡು ಹೋಗಿ ಪೂಜೆ ಪುನಸ್ಕಾರಗಳನ್ನು ಮಾಡಿಸಿದ ಆದರೂ ಅಣ್ಣ ಸುಧಾರಿಸಲಿಲ್ಲ. ಕೊನೆಗೆ ಅಪ್ಪ ಯಮಸಾಹಸ ಮಾಡಿ ಅಣ್ಣನನ್ನು ಮತ್ತೊಮ್ಮೆ ಹೈಸ್ಕೂಲಿಗೆ ಸೇರಿಸಿದ. ಆದರೂ ಅಣ್ಣ ದುಗುಡ, ಅವನ ಮೌನ ಒಡೆಯಲಿಲ್ಲ. ಸ್ಕೂಲಿಗೆ ಹೋಗದೆ ದಿನಗಟ್ಟಲೆ ತುಂಬಾಡಿ ಹೊಸಕೆರೆಯ ಏರಿಯ ಮೇಲೆ ನೀರಿನಂತೆ ಸದ್ದಿಲ್ಲದೆ ಕುಳಿತು ಬಿಡುತ್ತಿದ್ದ. ಆಗ ನಾನು ಸಣ್ಣವನಾದ್ದರಿಂದ ಅಣ್ಣನ ಅಪಮಾನವನ್ನಾಗಲಿ, ಅವನೊಳಗೆ ಕುದಿಯುತ್ತಿದ್ದ ಮನಸ್ಸನ್ನಾಗಲಿ ತಿಳಿಯುವ ಸಾಮರ್ಥ್ಯ ನನಗಿರಲಿಲ್ಲ. ಹೀಗಿರುವಾಗಲೆ ಅಣ್ಣ ಒಂದೆರಡು ದಿನ ಮನೆಗೆ ಬರಲಿಲ್ಲ. ಮೊದಲೇ ಎದೆಗುಂದಿದ್ದ ಅಪ್ಪ ಎಲ್ಲಾ ಕಡೆ ಹುಡುಕಿದ. ತನ್ನ ನೆಂಟರ ಮನೆಗಳಿಗೆಲ್ಲಾ ಹೋಗಿಬಂದ. ಎಲ್ಲೂ ಅಣ್ಣನ ಸುಳಿವಿರಲಿಲ್ಲ. ನನಗೂ ಏಕೋ ಒಳಗೊಳಗೆ ಹೇಳಿಕೊಳ್ಳಲಾರದ ಸಂಕಟ ಶುರುವಾಗಿತ್ತು. ಮೂರುದಿನಗಳ ನಂತರ ತುಂಬಾಡಿ ಹೊಸಕೆರೆಯಲ್ಲಿ ಯಾವುದೋ ಹೆಣ ತೇಲುತ್ತಿದೆಯೆಂಬ ಸುದ್ದಿ ಊರಲ್ಲೆಲ್ಲಾ ಹರಡಿತು''[5] ಎಂದು ಹೇಳುತ್ತಾರೆ. ಇಲ್ಲಿ ಮತ್ತೆ ಮತ್ತೆ ಅವಮಾನಗಳಿಗೆ ಎಡತಾಕುವುದು ದಲಿತ ವಿದ್ಯಾರ್ಥಿಯ ಪಾಲಿಗೆ ಸಾವಿನ ಮನೆಯ ಬಾಗಿಲು ಬಡಿದಂತೆಯೇ ಆಗುತ್ತದೆ. ಮನೆಯಲ್ಲಿನ ತಂದೆ ತಾಯಿಯರಿಗೆ ಶಿಕ್ಷಕರ ಈ ರೀತಿಯ ವರ್ತನೆಗಳು ತಮ್ಮ ಮಗ/ಳ ಕುರಿತಂತೆ ಶಿಕ್ಷಕರ ಕಾಳಜಿ ಎಂಬಂತೆಯೇ ಭಾಸವಾಗುತ್ತವೆ.

ದು. ಸರಸ್ವತಿಯವರ ಶಾಲಾ ಬದುಕಿನ ಘಟನೆ ಇದನ್ನು ಮತ್ತಷ್ಟು ಮಾರ್ಮಿಕ ಗೊಳಿಸುತ್ತದೆ. 'ಶಾಲೆಯಲ್ಲಿ ಉಚ್ಚೆಗೆ ಅವಸರವಾಗಿತ್ತು ಎಷ್ಟು ಕೇಳಿದ್ರು ಟೀಚರ್ ಬಿಡ್ಲೆ ಇಲ್ಲ, ಬೆಲ್ ಹೊಡ್ದ್ ತಕ್ಷಣ ಓಡ್ಬೇಕು ಅಂದ್ಕೊಂಡ್ರೆ ಜನಗಣಮನ ಹಾಡೇಹೋಗ್ಬೇಕು ಅಂದ್ರು, ಪೀಡೆ ಜನಗಣಮನ ಹಾಡ್ತಾನೆ ಉಚ್ಚೆ ಬಂದೇಬಿಡ್ತು ಲಂಗ ಒತ್ತಿಹಿಡ್ಕೊಂಡ್ರು ಉಚ್ಚೆ ಹರ್ದು ನೆಲ್ದಮೇಲೆ ನಿಂತ್ಕಂತು. ಯಾರ್ಗೂ ಗೊತ್ತಾಗ್ದಂಗ್ ಓಡೋಗಣ ಅನ್ಕೊಳೋ ವೇಳೆಗೆ ಹಿಂದಿನಿಂದ ಟೀಚರ್ ಜಡೆ ಇಡ್ದು ಎಳ್ದು ಕತ್ತೆ ನಾಚ್ಕೆ ಆಗಲ್ವ ಎಮ್ಮೆ ಇದ್ದ ಹಾಗಿದೀಯ ಉಚ್ಚೆ ಮಾಡ್ಕೊಂಡಿದ್ದಲ್ದೆ ಹಾಗೇ ಹೋಗ್ತಾ ಇದೀಯ, ಒರ್ಸಿ ಹೋಗು' ಅಂತ ಜಡೆಹಿಡ್ದು ಎಳೆದಾಡಿದ್ರು. ಸುತ್ತ ಇದ್ದ ಹುಡ್ಗ ಹುಡ್ಗೀರೆಲ್ಲ ನಕ್ರು, ಟೀಚರ್ ಹೋದ್ಮೇಲೆ ಉಚ್ಚೆಪುರ್ಕಿ ಅಂತ ಅಣಕಿಸಿ ನಕ್ರು. ಎಷ್ಟು ನೋವಾಯ್ತು, ನಾನ್ ಆ ಶಾಲೆಗೆ ಹೋಗಲ್ಲ ಬೇರೆ ಶಾಲೆಗೋಗ್ತೀನಿ ಅಂತ ಅವ್ವನ ಗೋಗರ್ದೆ ಕಾರಣ ಮಾತ್ರ ಹೇಳ್ಳಿಲ್ಲ. ಒಂದ್ವಾರ ಆದ್ಮೇಲೆ ಶಾಲೆಗೋಗಿದ್ದು.

ಎಂಟನೇ ಕ್ಲಾಸಿನಿಂದ ಇಂಗ್ಲಿಷ್ ಮೀಡಿಯಂಗೆ ಹಾಕಿದ್ರು. ಇಂಗ್ಲಿಷ್ ನಲ್ಲಿ ಮಾತಾಡಕೆ ಬರಲ್ಲ ಅಂತ ಬಾಯೆ ಬಿಡ್ತಾ ಇರ್ಲಿಲ್ಲ. ಒಂದಿನ ಗಣಿತದ ಟೀಚರ್ (o+b)2 ಬಿಡಿಸಿ ಹೇಳು ಅಂದ್ರು, ಸುಮ್ನೆ ನಿಂತ್ಕೊಂಡೆ, ನನ್ಗೆ ಅರ್ಥವಾಗ್ಲಿ ಅಂತ ಟೀಚರ್ ಕನ್ನಡದಲ್ಲಿ ಬೈದ್ರು, ಇಲ್ಲ ಅರಚಿದ್ರು 'ತಲೆ ಒಳ್ಗೆ ಸೆಗ್ಣಿ ತುಂಬಿದೆ ಒಂದ್ ಸಣ್ ಪ್ರಶ್ನೆಗೂ ಉತ್ರ ಕೊಡೋಕೆ ಬರಲ್ಲ. ಎದೆ ಸೀಳಿದ್ರೆ ನಾಕ್ ಅಕ್ಷರ ಇಲ್ಲ ಜಾತಿ ಹೆಸ್ರು

ಹೇಳ್ಕೊಂಡು ಬಂದ್ ಬಿಡ್ತೀರ ಶಾಲೆ ಮರ್ಯಾದೆ ತೆಗ್ಯೋಕೆ, ನಂಗೂ ಕೂಗ್ಬೇಕು ಅನ್ನಿಸ್ತು (o+b)2=o2+b2+2ob) ಅಂತ, ಆದ್ರೆ ಇಂಗ್ಲೀಷ್ ನಲ್ಲಿ ಕೂಗೋಕೆ ತೋಚ್ಲೆ ಕಣ್ಣಲ್ಲಿ ನೀರು ಬಂತು. ಅವಮಾನದ ಕಪ್ಪು ಬಣ್ಣ ಭಯವಾಗಿ ನುಸುಳಿತ್ತು. ಕಣ್ಣು ಮುಚ್ಚಿದರೆ ಕಪ್ಪು, ಹಳದಿ, ಕೆಂಪು ಬಣ್ಣಗಳೇ ಕುಣಿದು ಭಯದಿಂದ ಬಿಡುಗಡೆಯೇ ಇಲ್ಲವೇನೋ ಅನ್ನಿಸಿ ಭಯದ ಮುದ್ದೆಯಾದೆ. ಹಳದಿ, ಕಪ್ಪು, ಕೆಂಪು ಬಣ್ಣಗಳು ಚೆಂಡಾಡಿದವು. ನಾನು ಪಾಸೇ ಆಗಲ್ಲ ದಡ್ಡಿಯಾಗಿ ಮೂಲೆ ಸೇರ್ತೀನಿ. ನಾನ್ ದಡ್ಡಿ ಅದಕ್ಕೆ ಟೀಚರ್ ಬಯ್ಯೋದು ಅಂತ ತೀರ್ಮಾನಿಸ್ಕೊಂಡ್ ಬಿಟ್ಟೆ. ಆದ್ರೆ ನನ್ನವ್ವಂಗೆ ಮಾತ್ರ ನಾನ್ ಜಾಣೆ" ಎಂದು ತಮ್ಮ ಶಾಲೆಯ ಅನುಭವಗಳನ್ನು ಬಿಚ್ಚಿಡುತ್ತಾರೆ.

ಹೀಗೆ ಬಿಚ್ಚಿಡುವಾಗ ಮಕ್ಕಳಲ್ಲಿ ಉಂಟಾಗುವ ದೈಹಿಕ ನೋವುಗಳು, ಮಾನಸಿಕ ತೊಳಲಾಟಗಳು ಎಂತವೆಂದು ಪ್ರತಿಯೊಂದು ವಾಕ್ಯದಲ್ಲಿಯೂ ವಿಸ್ತರಿಸುತ್ತಲೇ ಹೋಗುತ್ತಾರೆ. ಇವು ನಿರೂಪಕಿಯ ನೋವುಗಳು ಮಾತ್ರವಲ್ಲದೆ ಇಡೀ ವಿದ್ಯಾರ್ಥಿ ಸಮುದಾಯವನ್ನೇ ಒಳಗೊಳ್ಳುತ್ತಾ ಸಾಗುತ್ತದೆ. ಮಕ್ಕಳ ನೋವನ್ನು ಅರ್ಥಮಾಡಿಕೊಳ್ಳದ ಶಿಕ್ಷಕ ವರ್ಗ ಮತ್ತೆ ಮತ್ತೆ ಜಾತಿ, ಲಿಂಗ, ವರ್ಣಗಳ ಆಧಾರದ ಮೇಲೆ ಮತ್ತೆ ಮತ್ತೆ ತನ್ನದೇ ವಯಸ್ಸಿನ ವಿದ್ಯಾರ್ಥಿಗಳೆದುರು ಅವಮಾನಿಸುವುದು, ಶಿಕ್ಷಕರ ನಿರ್ಗಮನದ ನಂತರ ಮತ್ತಷ್ಟು ಹೆಚ್ಚುತ್ತದೆ. ಅದು ಅಡ್ಡಹೆಸರಾಗಿ ತನ್ನ ಜನರಿಗೆಲ್ಲಾ ಹಬ್ಬಿ ಮತ್ತಷ್ಟು ರಾದ್ಧಾಂತವೂ ಆಗುತ್ತದೆ. ಜೀವನದ ನಿರುತ್ಸಾಹಕ್ಕೂ, ಜಿಗುಪ್ಸೆಗೂ ಕಾರಣವಾಗಿ ಶಾಲಾ ಶಿಕ್ಷಣವನ್ನೇ ಮೊಟಕುಗೊಳಿಸುವ ಹಂತಕ್ಕೇ ತಲುಪುತ್ತದೆ. ಇದನ್ನು ಅತೀ ಸೂಕ್ಷ್ಮ ಮನಸ್ಸಿನ ಮಕ್ಕಳು ಸಾವೇ ಅಂತಿಮ ಪರಿಹಾರ ವೆನ್ನುವ ಮಟ್ಟಕ್ಕೂ ತೆಗೆದುಕೊಳ್ಳುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ. ಇದನ್ನು ತುಂಬಾಡಿರಾಮಯ್ಯ ನವರ ಆತ್ಮಕಥನದಲ್ಲಿ ಈಗಾಗಲೇ ನಿರೂಪಿಸಿದ್ದೇನೆ.

ದಲಿತ ಆತ್ಮಕತೆಗಳು ಶಾಲಾ ಶಿಕ್ಷಣದ ಹಂಚಿಕೆಯ ಅನುಭವ ಮತ್ತು ಬಹಿಷ್ಕಾರದ ಅಘಾತವನ್ನು ಸ್ಪಷ್ಟವಾಗಿ ಹೊರತರುತ್ತದೆ. ಇವು ಏಕಕಾಲದಲ್ಲಿ ದಲಿತ ಅನುಭವವನ್ನು ಶಾಲಾ ಶಿಕ್ಷಣ ಮತ್ತು ಶಾಲಾ ಜೀವನಕ್ಕೆ ಸಂಬಂಧಿಸಿದಂತೆ ಸಾಮಾನ್ಯ ಅನುಭವ ಎಂಬಂತೆ ಗ್ರಹಿಸಲಾಗುತ್ತದೆ ಅಥವಾ ಬಿಂಬಿಸಲಾಗುತ್ತದೆ. ದಲಿತ ಜೀವನ ಮತ್ತು ಆತ್ಮಕತೆಗಳು ಅಭಿವ್ಯಕ್ತಿಸುವಂತೆ ಶಾಲೆಯ ಸಂಧರ್ಭದಲ್ಲಿನ ಅನುಭವಗಳು ಸಾಮಾನ್ಯ ಎಂದು ಪರಿಗಣಿಸಲು ಸಾಧ್ಯವಾಗುವುದಿಲ್ಲ. ಶಾಲೆಗಳಂತಹ ಸಾರ್ವಜನಿಕ ಸಂಸ್ಥೆಗಳ ಸಂದರ್ಭದಲ್ಲಿ ನಿಸ್ಸಂದೇಹವಾಗಿ ಜಾತಿ, ಅಸ್ಪೃಶ್ಯತೆ, ಅಸಮಾನತೆಗಳನ್ನು ಶಾಶ್ವತಗೊಳಿಸುವ, ಅದರಲ್ಲೂ ಮುಖ್ಯವಾಗಿ ವ್ಯಕ್ತಿಗಳ ನೋವು ಅವಮಾನ ಮತ್ತು ಗಾಯಗಳಾಗಿಸುವಿಕೆಯಲ್ಲಿ ಪ್ರಭುತ್ವ ಮತ್ತು ರಾಜ್ಯದ ಒಳಗೊಳ್ಳುವಿಕೆಯನ್ನು ಇದು ಸೂಚಿಸುತ್ತದೆ. ಜಾತಿ ಶ್ರೇಣಿಯಿಂದ ಮಾತ್ರವಲ್ಲದೆ, ಬಡತನ, ಪಿತೃಪ್ರಭುತ್ವ ಮತ್ತು ಸಾಮಾಜಿಕ ವರ್ಗದ ಭೇಧಕದಲ್ಲಿ ಪ್ರಾಬಲ್ಯ ಹೊಂದಿರುವ ಸಾಮಾಜಿಕ ಜಗತ್ತಿನಲ್ಲಿ

ದಲಿತನಾಗಿರುವುದು ಎಂದರೆ ಏನು ಎಂಬುದರ ಮಾದರಿಯನ್ನು ನಾವು ನೋಡಲು ಪ್ರಾರಂಭಿಸುತ್ತೇವೆ.

ವೈವಿಧ್ಯಮಯ ದಲಿತ ಅನುಭವವನ್ನು ಒಂದು ನಿರ್ಧಿಷ್ಟ ಸಮುದಾಯದ ಅನುಭವವಾಗಿ ಕೇಂದ್ರೀಕರಿಸುತ್ತಿರುವುದನ್ನು ಕಾಣಬಹುದಾಗಿದೆ. ಅಂದರೆ ಅವಮಾನ ಮತ್ತು ಹೊರಗಿಡುವಿಕೆಯ ಅನುಭವದಿಂದ ತುಂಬಿದ ಆತ್ಮಚರಿತ್ರೆಗಳು 'ದಲಿತ' ಎಂಬ ಕೇಂದ್ರ ಅಂಶದಿಂದ ಗುರುತಿಸಲ್ಪಟ್ಟ ವಲಯದಲ್ಲಿ ಇರುವ ಅನುಭವವನ್ನು ಭಾವನೆ ಮತ್ತು ಕಟ್ಟು ತನದಿಂದ ಹೊರತರುತ್ತವೆ.

**ಅಡಿ ಟಿಪ್ಪಣಿಗಳು:**

1. ಅರವಿಂದ ಮಾಲಗತ್ತಿ, (2024), ಗೌರ್ಮೆಂಟ್ ಬ್ರಾಹ್ಮಣ, ಚೇತನ ಬುಕ್ ಹೌಸ್, ಮೈಸೂರು, ಪು.ಸಂ. 6–8
2. ಲಲಿತಾ ನಾಯಕ್ ಬಿ.ಟಿ., (2014), ಸಮಗ್ರ ಸಾಹಿತ್ಯ ಸಂಪುಟ–2, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು.ಸಂ. 442–43
3. ಮೊಗಳ್ಳಿ ಗಣೇಶ್, (2023), ನಾನೆಂಬುದು ಕಿಂಚಿತ್ತು, ದೇಸಿ ಪುಸ್ತಕ, ಬೆಂಗಳೂರು, ಪು.ಸಂ. 45
4. ತುಂಬಾಡಿ ರಾಮಯ್ಯ, (2014), ಮಣೆಗಾರ, ತುಂಬಾಡಿ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಟ್ರಸ್ಟ್, ತುಮಕೂರು, ಪು.ಸಂ. 8–9
5. ಸರಸ್ವತಿ ದು., (2001), ಈಗೇನ್ ಮಾಡೀರಿ?, ಮಾನಸ, ಬೆಂಗಳೂರು, ಪು.ಸಂ. 13

**ಪರಾಮರ್ಶನ ಗ್ರಂಥಗಳು:**


1. ಅರವಿಂದ ಮಾಲಗತ್ತಿ, (2024), ಗೌರ್ಮೆಂಟ್ ಬ್ರಾಹ್ಮಣ, ಚೇತನ ಬುಕ್ ಹೌಸ್, ಮೈಸೂರು.
2. ಲಲಿತಾ ನಾಯಕ್ ಬಿ.ಟಿ., (2014), ಸಮಗ್ರ ಸಾಹಿತ್ಯ ಸಂಪುಟ–2, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
3. ಮೊಗಳ್ಳಿ ಗಣೇಶ್, (2023), ನಾನೆಂಬುದು ಕಿಂಚಿತ್ತು, ದೇಸಿ ಪುಸ್ತಕ, ಬೆಂಗಳೂರು.
4. ತುಂಬಾಡಿ ರಾಮಯ್ಯ, (2014), ಮಣೆಗಾರ, ತುಂಬಾಡಿ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಟ್ರಸ್ಟ್, ತುಮಕೂರು.
5. ಸರಸ್ವತಿ ದು., (2001), ಈಗೇನ್ ಮಾಡೀರಿ?, ಮಾನಸ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.